


“ಸ್ವಲ್ಪು ಕಾಲು ತೆಗಿ ಶಿವಾ. ಕೆಳಗ ಕಟ್ಟಿಗೆ ಡಬ್ಬಿ ಆದ. ಅದನ್ನು ಎಳಕಂಡು ಅದರ ಮ್ಯಾಲೆ ಕುಂದರತೀನಿ”

ಶಿವರಾವು ಸಹಾಯ ಮಾಡಹೋದ. ಬೇಡಾಂತ ಹೇಳಿ ತಾನೇ ಡಬ್ಬಿ ಎಳಕೊಂಡು ಕೋಣೆಯ ಆ ಮೂಲೆಗೆ ಎಳಕೊಂಡು ಹೋಗಿ ಕುಂತಳು. ಕುಂತ ಮೇಲೆ ನೆಮ್ಮದಿಯಿಂದ ನಿಟ್ಟುಸಿರು ಬಿಟ್ಟಳು.

ಸ್ವಲ್ಪ ಹೊತ್ತು ಹಂಗೇ ಕುಂತಿದ್ದು ಏನೋ ನಿರ್ಧಾರಕ್ಕೆ ಬಂದವಳಂತೆ ಅಂದಳು–

“ನೋಡು ಶಿವಾ. ನಿನಗೆ ಹೆಂಗೇಳ್ಬೇಕೋ ಗೊತ್ತಾಗವಲ್ದು. ಬಡತನ ನನ್ನ ಹಿಂಗ ಮಾತಾಡಸಕತ್ಯಾದ. ನೀನು ಈಗ ಇಲ್ಲಿಗೆ ಬಂದಿರ ಉದ್ದೇಶನೂ ಗೊತ್ತಿಲ್ಲ ನನಗ. ನೋಡ್ತಿದ್ದೀಯಲ್ಲ ನನ್ನ ಪರಿಸ್ಥಿತಿ. ನೀನೀಗ ಉಂಡ ಅನ್ನ ರಾಘವಂದು. ಅವನು ಇವತ್ತು ರಾತ್ರಿ ಹೊಟ್ಟೆ ಸುಟಕಂಡೇ ಇರ್ಬೇಕು.”

“ಸಾಕಕ್ಕ... ಇನ್ನೇನೂ ಹೇಳ್ಬಾಡ” ಅಂದ ಶಿವರಾವು ಮುಜುಗರದಿಂದ.

ಅಕ್ಕ ನಿಲ್ಲಿಸಲಿಲ್ಲ.

“ರಾಘವನ್ನ ದಿನಾ ಹುಡುಕಿ ಹಿಡಿದಿಟ್ಟುಕೊಳ್ಳಕಾಗದೆ ಒದ್ದ್ಯಾಡ್ತಿದೀನಿ. ನಮ್ಮ ಕುಟುಂಬದಲ್ಲಿ ಮೂವರು ಗಣಮಕ್ಕಳು. ಒಬ್ರೂ ಕೆಲಸಕ್ಕ ಬರ್ಲಿಲ್ಲ. ಹೆಣಮಕ್ಕಳ ಕಷ್ಟ ಅವ್ರಿಗೆ ಗೊತ್ತಿಲ್ಲ. ನೀನು ಹೋದಿ. ಮತ್ತೆ ವಾಪಸು ಬಂದಿದ್ದರೆ ಚೆಂದಿರ್ತಿತ್ತು ಅಂದ್ಕೊಂಡ್ವಿ. ಸ್ವಲ್ಪ ದಿವ್ಸ ಅತ್ತು ಸುಮ್ಮನಾದ್ವಿ. ಆಮ್ಯಾಲೆ ವಾಸುಗೂ ನಿನ್ನ ಬುದ್ಧಿಗಳೇ ಬಂದ್ವು. ಅಮ್ಮ ಅಪ್ಪ ಸತ್ತು ಹೋದ ಮ್ಯಾಲೆ ಮನ್ಯಾಗ